# ಸ್ವಯಂ ಉದ್ಯೋಗಕ್ಕಾಗಿ ಆಧಾರ ಯೋಜನೆ

(ಸರ್ಕಾರದ ಆದೇಶದ ಸಂ.ಮ.ಮ.ಅ. 242 ಪಿಹೆಚ್‌ಪಿ-98 ದಿನಾಂಕ: 12-01-1999)

(ಸರ್ಕಾರದ ಆದೇಶದ ಸಂ.ಮ.ಮ.ಇ. 156. ಪಿಹೆಚ್‌ಪಿ.-2006 ದಿನಾಂಕ: 28-08-2006)

(ಸರ್ಕಾರದ ಆದೇಶದ ಸಂ.ಮ.ಮ.ಇ. 244 ಪಿಹೆಚ್‌ಪಿ-2007 ದಿನಾಂಕ: 25-06-2007)

ಅಂಗವಿಕಲರಿಗೆ ಸ್ವಯಂ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಆಧಾರ ಯೋಜನೆಯು ಜಾರಿಯಲ್ಲಿದೆ. ಈ ಯೋಜನೆಯ ಅಡಿಯಲ್ಲಿ ರೂ.15000 ಮೌಲ್ಯದ ಪೆಟ್ಟಿಗೆ ಅಂಗಡಿಯನ್ನು ಮತ್ತು ನಿರ್ವಹಣಾ ಬಂಡವಾಳ ರೂ.20000/-ಗಳನ್ನು ಬಡ್ಡಿರಹಿತ ಸಾಲವನ್ನಾಗಿ ಮಂಜೂರುಮಾಡಲಾಗುತ್ತದೆ. ಸಾಲವನ್ನು 40 ಕಂತಿನಲ್ಲಿ ಮರುಪಾವತಿ ಮಾಡಲು ಕಾಲಾವಕಾಶವಿರುತ್ತದೆ.

## ಉದ್ದೇಶ

ದೃಷ್ಟಿದೋಷವುಳ್ಳ, ಶ್ರವಣದೋಷವುಳ್ಳ, ಚಲನವಲನ ತೊಂದರೆ ಮತ್ತು ಮನೋವಿಕಲತೆಯುಳ್ಳ ಅಂಗವಿಕಲರಿಗೆ ಲಾಭದಾಯಕ ಉದ್ಯೋಗವನ್ನು ಒದಗಿಸಿಕೊಡುವುದು, ಅಂಗವಿಕಲರು ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಪ್ರೋತ್ಸಾಹಿಸುವುದು ಹಾಗೂ ಆರ್ಥಿಕ ಮಟ್ಟವನ್ನು ಅಭಿವೃದ್ಧಿಗೊಳಿಸಿ ಇವರು ಸಮಾಜದಲ್ಲಿ ಇತರರಿಗೆ ಸಮಾನವಾಗಿ ಬಾಳಲು ಅವಕಾಶ ಮಾಡಿಕೊಡುವುದು.





## ಅರ್ಹತೆ

ಫಲಾನುಭವಿಗಳಿಗೆ ಶೇ. 40 ಹಾಗೂ ಹೆಚ್ಚಿನ ಅಂಗವಿಕಲತೆ ಇರತಕ್ಕದ್ದು, ಗ್ರಾಮೀಣ ಅಭ್ಯರ್ಥಿಗಳಿಗೆ ರೂ.11,500ಗಳು ಮತ್ತು ನಗರದ ಅಭ್ಯರ್ಥಿಗಳಿಗೆ ರೂ.24,000ಗಳಿಗಿಂತ ಕಡಿಮೆ ವಾರ್ಷಿಕ ಆದಾಯ ಇರತಕ್ಕದ್ದು. ಅಕ್ಷರಸ್ಥರಾಗಿರಬೇಕು. ಸಣ್ಣ ವ್ಯಾಪಾರ ಮಾಡುವ ನೈಪುಣ್ಯವಿರಬೇಕು. ಕಳೆದ 10 ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಗಳಾಗಿರಬೇಕು. ಸರ್ಕಾರಕ್ಕೆ ಸುಸ್ತಿದಾರರಾಗಿರಬಾರದು. ಕನಿಷ್ಠ 18 ಹಾಗೂ ಗರಿಷ್ಠ 55 ವರ್ಷಗಳೊಳಗಿನ ನಿರುದ್ಯೋಗಿಗಳು ಈ ಯೋಜನೆಯ ಸೌಲಭ್ಯ ಪಡೆಯಬಹುದಾಗಿದೆ.

### ಫಲಾನುಭವಿಗಳ ಆಯ್ಕೆ:

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

ಸರ್ಕಾರದ ಆದೇಶ ಸಂಖ್ಯೆ:ಮಮಇ/189/ಪಿಹೆಚ್‌ಪಿ/2015 ದಿನಾಂಕ:04-06-2016ರಲ್ಲಿ ಆಧಾರ ಯೋಜನೆಯಡಿ ಯೋಜನೆಯ ಪ್ರಾರಂಭದಿಂದ 31.03.2014ರವರೆಗೆ ಸ್ವಯಂ ಉದ್ಯೋಗಕ್ಕಾಗಿ ನೀಡಲಾದ ಸಾಲದ ಮೊತ್ತ ರೂ.11,07,80,443/-(ರೂ.ಹನ್ನೊಂದು ಕೋಟಿ ಏಳು ಲಕ್ಷದ ಎಂಭತ್ತು ಸಾವಿರದ ನಾಲ್ಕು ನೂರ ನಲವತ್ತ ಮೂರು ಮಾತ್ರ)ಗಳನ್ನು ಮನ್ನಾ ಮಾಡಿ 10,069 ಫಲಾನುಭವಿಗಳಿಗೆ ಸೌಲಭ್ಯ ಒದಗಿಸಿದೆ.